ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/42/ಸಿಸಿಟೆಕ್/2018-19/3012

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:12-02-2019 13

**-: ಸುತ್ತೋಲೆ :-**

ವಿಷಯ: ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ ಇಲ್ಲಿ "Open Source Technologies in Teaching for Technical Teachers" ಎಂಬ ವಿಷಯದ ಅಲ್ಪಾವಧಿ ತರಬೇತಿಯನ್ನು ಬದಲಾದ ದಿನಾಂಕ ಆಯೋಜಿಸಲು ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಡಿಟಿಇ/42/ಸಿಸಿಟೆಕ್/2018-19, ದಿನಾಂಕ: 25-01-2019.
2. ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ ಇವರ ಪತ್ರ ಸಂಖ್ಯೆ: ಜಿಪಿಟಿಬಿ/01/ಸಿಸಿಟೆಕ್/2018-19/738, ದಿ:02-02-2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಆದೇಶದಂತೆ ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ ಇಲ್ಲಿನ ಸಿಸಿಟೆಕ್ ಉಪಘಟಕದ ವತಿಯಿಂದ ವಿವಿಧ ಪಾಲಿಟೆಕ್ನಿಕ್ ಕಾಲೇಜುಗಳ ಎಲ್ಲಾ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ದಿನಾಂಕ:04-02-2019 ರಿಂದ ದಿ:08-02-2019 ರವರೆಗೆ (2.00PM ರಿಂದ 6.15PM ರವರೆಗೆ) "Open Source Technologies in Teaching for Technical Teachers" ಎಂಬ ವಿಷಯದ ಬಗ್ಗೆ ಒಂದು ವಾರದ ಅಲ್ಪಾವಧಿ ತರಬೇತಿ ನಡೆಸಲು ಅನುಮೋದನೆ ನೀಡಲಾಗಿತ್ತು. ಆದರೆ ಸದರಿ ತರಬೇತಿಗೆ ಅಭ್ಯರ್ಥಿಗಳು ಕಡಿಮೆ ಸಂಖ್ಯೆಯಲ್ಲಿ ನೊಂದಾಯಿಸಿರುತ್ತಾರೆ. ಆದ ಕಾರಣ ಬದಲಾದ ದಿ:25-02-2019 ರಿಂದ ದಿ:01-03-2019 ರವರೆಗೆ ನಡೆಸಲು ಅನುಮೋದನೆ ನೀಡಲಾಗಿದೆ. ಸದರಿ ತರಬೇತಿಯನ್ನು ಅಪರಾಹ್ನ 2.00PM ರಿಂದ ಪ್ರಾರಂಭಿಸುವ ಕಾರಣ ತರಬೇತಿ ಆಯೋಜಿಸುತ್ತಿರುವ ಸಂಸ್ಥೆಯಿಂದ ಸುಮಾರು 40 ರಿಂದ 50 KM ಅಂತರ ಇರುವ ಸಂಸ್ಥೆಗಳ ಉಪನ್ಯಾಸಕರು ಮಾತ್ರ ಪ್ರಾಚಾರ್ಯರಿಂದ ಪ್ರಸ್ತುತ ಸೆಮಿಸ್ಟರ್‌ನಲ್ಲಿ ಒಂದು ತರಬೇತಿಗೆ ಮಾತ್ರ ಹಾಜರಾಗುತ್ತಿದ್ದಾರೆಂಬ ಶಿಫಾರಸ್ಸಿನೊಂದಿಗೆ ಅರ್ಜಿ ಸಲ್ಲಿಸಿ, ನೊಂದಾಯಿಸಿಕೊಳ್ಳುವ ಸಲುವಾಗಿ ಸಂಯೋಜಕರಾದ ಶ್ರೀ ಟಿ ಡಿ ಮೊಹಿಯುದ್ದೀನ್, ಉಪನ್ಯಾಸಕರು, ಮೊಬೈಲ್ ಸಂಖ್ಯೆ: 9449250712 ಮತ್ತು ಶ್ರೀ.ಕೆ ಲಿಂಗಮೂರ್ತಿ, ಉಪನ್ಯಾಸಕರು, ಮೊಬೈಲ್ ಸಂಖ್ಯೆ: 9980985742 ಇವರನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಸದರಿ ತರಬೇತಿಗೆ ಹಾಜರಾಗಲು ಪ್ರಾಚಾರ್ಯರಿಂದ ಅನುಮತಿ ಪಡೆದು ಅರ್ಜಿ ಸಲ್ಲಿಸಿ, ಹೆಸರುಗಳನ್ನು ನೊಂದಾಯಿಸಿಕೊಂಡಿರುವ (ಗರಿಷ್ಠ 30) ಉಪನ್ಯಾಸಕರ ಪಟ್ಟಿಗೆ ದಿನಾಂಕ:22-02-2019 ರೊಳಗಾಗಿ ಇಲಾಖೆಯಿಂದ ಅನುಮೋದನೆ ಪಡೆಯುವುದು ಕಡ್ಡಾಯಗೊಳಿಸಿದೆ.

13.2.19
ಜಂಟಿ ನಿರ್ದೇಶಕರು(ಸಿಡಿಸಿ)

**ಇವರಿಗೆ:- ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ ಇವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.**

ಪ್ರತಿ: 1. ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು ಇವರಿಗೆ ಡಿ.ಟಿ.ಇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.